# ಕಿಂಗ್ ಖಾನ್‌ಗೆ ವಯಸ್ಸಾಗುವುದಿಲ್ಲ



ಕಿಂಗ್ ಖಾನ್ ಎಂದೇ ಹೆಸರು ಪಡೆದಿರುವ ಶಾರೂಕ್ ಖಾನ್ ಕಳೆದ ವಾರ 53ನೇ ವರ್ಷಕ್ಕೆ ಕಾಲಿಟ್ಟಿದ್ದಾನೆ. ಯೌವನದಲ್ಲಿ ಇದ್ದ ಅದೇ ಹುರುಪು, ಉತ್ಸಾಹ ಮತ್ತು ಎನರ್ಜಿಯನ್ನು ಉಳಿಸಿಕೊಂಡಿರುವ ಶಾರೂಕ್, ಹುಟ್ಟುಹಬ್ಬದ ದಿನ ತನ್ನ ಹೊಸ ಸಿನಿಮಾ 'ಝೀರೊ'ದ ಟೀಸರ್ ಬಿಡುಗಡೆಯ ಸಂಭ್ರಮವನ್ನೂ ಅನುಭವಿಸಿದ್ದಾನೆ. ಬಾಲಿವುಡ್‌ನಲ್ಲಿ ಎರಡೂವರೆ ದಶಕಗಳ ಬಳಿಕವೂ ಎವರ್‌ಗ್ರೀನ್ ಹೀರೋ ಎಂಬ ಜನಪ್ರಿಯತೆಯನ್ನು ಉಳಿಸಿ ಕೊಂಡಿರುವುದು ನಿಜಕ್ಕೂ ಶಾರೂಕ್‌ನ ಹೆಗ್ಗಳಿಕೆಯೇ. ಈ ಜನಪ್ರಿಯತೆ ಉತ್ತರ–ದಕ್ಷಿಣವೆನ್ನದೆ ಭಾರತದಾದ್ಯಂತ ಇರುವುದು ನಿರ್ಮಾಪಕರ ಕಿಸೆಯನ್ನೂ ಸದಾ ಬೆಚ್ಚಗಾಗಿರಿಸಿದೆ.

ಹಾಗೆ ನೋಡಿದರೆ ಶಾರೂಕ್ ಇಡೀ ಭಾರತಕ್ಕೆ ಸೇರಿದವನು. ಅದನ್ನು ಆತ ಹಲವು ಸಲ ಹೆಮ್ಮೆಯಿಂದ ಹೇಳಿಕೊಂಡದ್ದಿದೆ. ಆತ ಹುಟ್ಟಿದ್ದು ದೆಹಲಿಯಲ್ಲಿ. ಬಾಲ್ಯದ ಐದು ವರ್ಷಗಳ ಕಾಲ ಬೆಳೆದದ್ದು ನಮ್ಮ ಕರ್ನಾಟಕದ ಮಂಗಳೂರಿನಲ್ಲಿ – ಅಜ್ಜನ ಮನೆಯಲ್ಲಿ. ಬಾಲ್ಯದ ಹೆಸರು ಅಬ್ದುಲ್ ರೆಹಮಾನ್. ತಾಯಿ ಹೈದರಾಬಾದಿ. ತಂದೆ ಪಠಾಣ. ಪತ್ನಿ ಗೌರಿ ಪಂಜಾಬಿ. ಹೀಗಾಗಿ ಆತ ಒಂದು ರೀತಿಯಲ್ಲಿ ಮಿಸ್ಟರ್ ಇಂಡಿಯಾ! ಅದಕ್ಕೂ ಮಿಗಿಲಾಗಿ ಆತ ಐಪಿಎಲ್ ಕ್ರಿಕೆಟ್‌ನಲ್ಲಿ ಒಡೆತನ ಹೊಂದಿರುವುದು ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ್ದು.

ಕಾಲೇಜಿನಲ್ಲಿದ್ದಾಗ ರಂಗಭೂಮಿ ಮತ್ತು ಟೀವಿಗಳಲ್ಲಿ ನಟಿಸಿ ಹೆಸರು ಪಡೆದಿದ್ದ ಶಾರೂಕ್ 'ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ'ದ ವಿದ್ಯಾರ್ಥಿ. ಆದರೆ ಆತನಿಗೆ ಫುಟ್‌ಬಾಲ್ ಮತ್ತು ಹಾಕಿ ಆಟದ ಮೇಲೆ ತುಂಬ ಮೋಹವಿತ್ತು. ಮುಂದೆ ಫುಟ್‌ಬಾಲ್ ಆಟಗಾರ ಆಗಬೇಕೆಂದೇ ಬಯಸಿದ್ದ. ಆದರೆ ಎಳವೆಯಲ್ಲೇ ಭುಜಕ್ಕೆ ಆದ ಗಾಯವೊಂದು ಆತನ ಜೀವನದ ದಿಕ್ಕನ್ನು ಬದಲಿಸಿತು. ರಂಗಭೂಮಿಯಲ್ಲಿ ಪಡೆದ ಹೆಸರು ಟಿವಿಗೆ ಕರೆದೊಯ್ಯಿತು. 1989ರಲ್ಲಿ ಆತ ನಟಿಸಿದ ಫೌಜಿ ಎನ್ನುವ ಟಿವಿ ಧಾರಾವಾಹಿ ಸಾಕಷ್ಟು ಜನಪ್ರಿಯವಾಗಿತ್ತು. ಅಲ್ಲಿಂದ ಬಾಲಿವುಡ್‌ಗೆ ಪಯಣ.

ಈಗ ಬಾಲಿವುಡ್‌ನಲ್ಲಿ ಈತನನ್ನು ಸರಿಗಟ್ಟುವವರಿಲ್ಲ. ಸಿನಿಮಾ ರಂಗದ ಒಳಗೂ, ಹೊರಗೂ ಶಾರೂಕ್ ಸಾಕಷ್ಟು ಪ್ರಭಾವಶಾಲಿ. ಸಿನಿಮಾಗಳಲ್ಲೂ ಈತನಿಗೆ ಎರಡು ಹೆಸರುಗಳು ಅಂಟಿಕೊಂಡೇ ಬಂದಿವೆ. ಸುಮಾರು 9 ಸಿನಿಮಾಗಳಲ್ಲಿ ಈತ ನಿರ್ವಹಿಸಿದ ಪಾತ್ರದ ಹೆಸರು ರಾಹುಲ್! ಹಾಗೆಯೇ 6 ಸಿನಿಮಾಗಳಲ್ಲಿ ರಾಜು ಎನ್ನುವ ಹೆಸರು. ಶಾರೂಕ್ ಬೇಡವೆಂದರೂ ನಿರ್ಮಾಪಕರಿಗೆ ಇದೇ ಹೆಸರು ಬೇಕಂತೆ!

ಸಾಕಷ್ಟು ಸಾಹಸ ದೃಶ್ಯಗಳಲ್ಲಿ ಶಾರೂಕ್ ಖುದ್ದಾಗಿ ನಟಿಸಿದ್ದರೂ ಕುದುರೆ ಸವಾರಿ ಎಂದರೆ ಈಗಲೂ ಭಯವಂತೆ! ಜೊತೆಗೆ ಜೀವನದಲ್ಲಿ ಒಮ್ಮೆಯೂ ಐಸ್‌ಕ್ರೀಂ ತಿಂದಿಲ್ಲವಂತೆ! 1994 ರಲ್ಲಿ ಹೀರೊ ಆಗಿ ನಟಿಸಿದ 'ಕಭಿ ಹಾಂ ಕಭಿ ನಾ' ಸಿನಿಮಾದಲ್ಲಿ 25 ಸಾವಿರ ರೂಪಾಯಿ ಪಡೆದಿದ್ದ ಶಾರೂಕ್ ಇವತ್ತು ಚಿತ್ರವೊಂದರ ನಟನೆ, ವಿತರಣೆ ಹಕ್ಕು ಮುಂತಾಗಿ ಕೋಟಿಗಟ್ಟಲೆ ಬೆಲೆ ಬಾಳುತ್ತಾನೆ. ಮೂವರು ಮಕ್ಕಳಾಗಿದ್ದರೂ ಆತ ಬಾಲಿವುಡ್ ಪ್ರೇಕ್ಷಕರ ಪಾಲಿಗೆ ಇನ್ನೂ ನವತರುಣನೇ.

ಶಾರೂಕ್‌ಗೆ ಇರುವ ವಿಚಿತ್ರ ಅಭ್ಯಾಸವೊಂದು ನಿಮ್ಮನ್ನು ನಗಿಸುವುದು ಖಂಡಿತ. ಪ್ರತಿದಿನವೂ ಶಾರೂಕ್ ಮಲಗುವಾಗ ಒಗೆದು ಇಸ್ತ್ರಿ ಹಾಕಿಟ್ಟ ಪೈಜಾಮಾವನ್ನೇ ಧರಿಸುತ್ತಾನೆ! ಅದೇಕೆ ಹಾಗೆ... ಎಂದು ಕೇಳಿದರೆ ಆತ ಹೇಳುವುದು– ಯಾರಿಗೆ ಗೊತ್ತು.. ಕನಸಿನಲ್ಲಿ ಯಾರಾದರೂ ನನ್ನನ್ನು ಭೇಟಿಯಾಗಲು ಬರಬಹುದು!

■ ಬಿಂದು